"ಓಹ್! ಇಲ್ಲೊಂದು ದೊಡ್ಡ ಅನಾಹುತವೇ ನಡೆದಿದೆ. ಮದುವೆ ಹುಡುಗಿ ರಾಖಿಯೇ ಕಾಣೆಯಾಗಿದ್ದಾಳೆ."

"ಅವಳು ಡ್ರೆಸ್ ಮಾಡಿಕೊಳ್ಳಲು ಮಹಡಿಯತ್ತ ಹೋಗಿದ್ದನ್ನು ನಾವೇ ಕಂಡಿದ್ದೆವಲ್ಲ."

"ಹೌದು. ಆದರೆ, ಆಮೇಲೆ ನಾಪತ್ತೆ. ಕೋಣೆಯೊಳಗೆ ಆಕೆ ಸಾಯಿರಾ ಜೊತೆ ಹೋಗಿದ್ದನ್ನು ಕಂಡವರಿದ್ದಾರೆ. ತುಸು ಹೊತ್ತಿನಲ್ಲಿ, ಸಾಯಿರಾ ಹೊರಬಂದು ವಾಶ್ ರೂಮಿನತ್ತ ಹೋಗಿದ್ದನ್ನು ನೋಡಿದ್ದಾರೆ. ಆದರೆ, ಎಷ್ಟು ಸಮಯವಾದರೂ, ರಾಖಿ ಹೊರಬರದಿದ್ದಾಗ ಜೋರಾಗಿ ಬಾಗಿಲು ಬಡಿದು, ತಳ್ಳಿದಾಗ ಅದು ತೆರೆದುಕೊಂಡಿತು! ಬಾಗಿಲಿಗೆ ಅಗಳಿಯೇ ಹಾಕಿರಲಿಲ್ಲ. ಕೋಣೆಯೊಳಗೆ ಇದ್ದಿದ್ದು ಸಾಯಿರಾ!"

"ಅಂದರೆ, ರಾಖಿ ಬುರ್ಖಾ ಧರಿಸಿ ಹೊರಬಂದಿದ್ದಳೇ?"

"ಹೌದು. ಸಾಯಿರಾ ನಿದ್ದೆಯ ಮಂಪರಿನಲ್ಲಿದ್ದಳಂತೆ. ಆಕೆಗೆ ಪರಬತ್ತಿನಲ್ಲಿ ಮತ್ತು ಬರಿಸುವ ಔಷಧ ನೀಡಿದಂತಿದೆ. ರಾಖಿಯ ಮೊಬೈಲೂ ಅಲ್ಲೇ ಇತ್ತು."

"ರಾಖಿ ಅಷ್ಟು ಬೇಗ ಎಲ್ಲಿ ಹೋದಳು?"

ಕರಮಚಂದ ಉತ್ತರಿಸಬೇಕೆನ್ನುವಾಗಲೇ ವಕೀಲ ದೇವಯ್ಯ ಬಂದು, ಬಾಯಿ ಹಾಕಿದ,

"ಏನಾದರೂ ಸುಳಿವು ಸಿಕ್ಕಿತೆ? ರಾಖಿ ಎಲ್ಲಿ ಹೋಗಿರಬಹುದು? ಸೆಕ್ಯುರಿಟಿಯವನೂ ಆಕೆ ಹೋದುದನ್ನು ಕಂಡಿಲ್ಲವಂತೆ!"


"ಪೊಲೀಸಿಗೆ ಹೇಳಿದ್ದೇನೆ. ಆಕೆ ಹೆಚ್ಚು ದೂರ ಹೋಗಿರಲಾರಳು." ಕರಮಚಂದ ಒಗಟಿನಂತೆ ಮಾತನಾಡಿದ.

ಅಷ್ಟರಲ್ಲಿ ಆ ಕಡೆಯಲ್ಲಿ ಯಾರೋ ಹೊಡೆದಾಡಿದಂತೆ ಕಾಣಿಸಿತು. ನಾವು ಅತ್ತ ಸರಿದೆವು. ಪೂವಯ್ಯನು ವಿಶುವಿನ ಕತ್ತಿನ ಪಟ್ಟಿ ಹಿಡಿದು, ವಾಚಾಮಗೋಚರವಾಗಿ ಬಯ್ಯುತ್ತಿದ್ದ.

"ಇದಕ್ಕೆಲ್ಲಾ ನೀನೇ ಕಾರಣ. ರಾಖಿ ಎಲ್ಲಿ ಹೋಗಿದ್ದಾಳೆ ಹೇಳು? ನೆಕ್ಲೇಸ್ ಕಳ್ಳ!"

"ಭಾವ, ನಾನೇನೂ ಮಾಡಲಿಲ್ಲ. ನನ್ ಮೇಲೆ ಯಾಕೆ ರೇಗ್ತೀರಿ?"

"ರೀ, ಪೂವಯ್ಯ. ನೀವು ಮೈಮೇಲೆ ಕೈ



ಹಾಕುವಂತಿಲ್ಲ. ಇವರು ನಿಮಗೇನು ಮಾಡಿದ್ದಾರೆ?" ಕರಮಚಂದ ಜಗಳ ಬಿಡಿಸಿದ.

"ಇವ್ನಿಂದಲೇ ಎಲ್ಲಾ ಆಗಿದ್ದು. ರಾಖಿಯನ್ನ ಹಾಳು ಮಾಡಿದ್ದು ಇವನೇ. ಮನೆಹಾಳ." ಪೂವಯ್ಯ ಅರಚಿದ.

ಅಂಗಿಯ ಕತ್ತುಪಟ್ಟಿ ಸರಿಪಡಿಸುತ್ತಾ ವಿಶು ತುಟಿ ಬಿಚ್ಚಿದ,

"ಸಾರ್, ಆಗಿದ್ದು ಏನೂ ಇಲ್ಲ. ರಾಖಿಗೆ ದಿಲೀಪ್ ಅನ್ನುವವನ ಜೊತೆ ಲವ್ ಇತ್ತು. ಅವ್ನು ಬಡವ ಅಂತ ಇವರ ವಿರೋಧವಿತ್ತು. ಅವ್ನು ನನಗೆ ಚೆನ್ನಾಗಿ ಪರಿಚಯದವನು. ರಾಖಿ ನನ್ನ ಬೆಂಬಲ ಕೋರಿದಳು. ನಾನು ಅವಳ ಪರವಾಗಿ ವಾದಿಸಿದೆ. ಅದಕ್ಕೇ ಇವರಿಗೆ ನನ್ನ ಮೇಲೆ ಕೋಪ. ಆಮೇಲೆ ಪೂವಯ್ಯ ಗೂಂಡಾಗಳಿಂದ ಬೆದರಿಕೆ ಹಾಕಿಸಿ, ಅವನನ್ನು ವಿರಾಜಪೇಟೆಯಿಂದಲೇ ಓಡಿಸಿಬಿಟ್ಟ. ಇದು ಎರಡು ವರ್ಷಗಳ ಹಿಂದಿನ ಕತೆ. ಈಗ ಅವಳು ಕಾಣೆಯಾದರೆ, ನಾನೇಕೆ ಅದಕ್ಕೆ ಹೊಣೆಯಾಗುತ್ತೇನೆ?"

"ಓಹ್!... ಬಹಳ ಆಸಕ್ತಿದಾಯಕವಾಗಿದೆ.